## ಇಡೀ ದೇಶಕ್ಕೆ ರಿಂಗ್ ರೋಡ್!

ಇಲ್ಲಿನ ರಿಂಗ್ ರಸ್ತೆಯಲ್ಲಿ ಪ್ರಯಾಣ ಮಾಡದಿದ್ದರೆ ನಿಮ್ಮಿಡೀ ಪ್ರವಾಸವೇ ನಿರರ್ಥಕವಾದೀತು. ಅಂಥ ಜನಪ್ರಿಯತೆ ಇದರದ್ದು. ರಸ್ತೆಯ ಇಕ್ಕೆಲಗಳಲ್ಲಿ ಕಪ್ಪು ಬಣ್ಣದ ಮರಳು ತುಂಬಿದ್ದರೆ, ಕೆಲವೆಡೆ ರಸ್ತೆಯ ಎರಡೂ ಬದಿ ಗುಡ್ಡ ಪ್ರದೇಶಗಳು. ವಾಹನ ಸಂಚಾರ ಅತಿ ವಿರಳವಾಗಿರುವ ಈ ರಸ್ತೆಯಲ್ಲಿನ ಪಯಣ ಬೇರೆ ಗ್ರಹದಲ್ಲಿದ್ದೇವೇನೋ ಎಂಬಂತೆ ಮಾಡುತ್ತದೆ.

ಐಸ್‌ಲ್ಯಾಂಡ್‌ನ ಪ್ರೇಕ್ಷಣೀಯ ಸ್ಥಳಗಳು ದ್ವೀಪದ ದಕ್ಷಿಣದ 'ಗೋಲ್ಡನ್ ಸರ್ಕಲ್'ನಿಂದ ಪ್ರಾರಂಭವಾಗಿ, ಉತ್ತರದ 'ಡೈಮಂಡ್ ಸರ್ಕಲ್'ವರೆಗೂ ವಿಸ್ತರಿಸಿದೆ. ಇವೆರಡನ್ನೂ ಸಂಪರ್ಕಿಸಲು 2500 ಕಿ.ಮೀ. ರಿಂಗ್ ರಸ್ತೆ ನಿರ್ಮಿಸಲಾಗಿದೆ. ದ್ವೀಪಕ್ಕೆ ಬರುವ ಪ್ರವಾಸಿಗರು ಈ ವರ್ತುಲ ರಸ್ತೆಯಲ್ಲಿ ಇಡೀ ದ್ವೀಪದ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಬಹುದಲ್ಲದೆ, ಹವಾಮಾನ ವೈಪರೀತ್ಯವನ್ನು ಪ್ರತ್ಯಕ್ಷ ನೋಡಬಹುದು.



ಪಡೆಯುವ ಈ ನಾಲ್ಕು ಲಕ್ಷ ಜನಸಂಖ್ಯೆಯ ದ್ವೀಪರಾಷ್ಟ್ರ, ಜಗತ್ತಿನ ಮೂರನೇ ಅತ್ಯಂತ ದುಬಾರಿ ದೇಶ.

ಕೆಫ್ಲಾವಿಕ್‌ನಲ್ಲಿ ಇಳಿದ ತಕ್ಷಣ ನಾವು ಮಾಡಿದ ಮೊದಲ ಕೆಲಸ, ಅಲ್ಲಿನ ಸೂಪರ್ ಮಾರ್ಕೆಟ್‌ನಲ್ಲಿ ಅತ್ಯವಶ್ಯಕವಾದ ಕೆಲವೇ ಸಾಮಗ್ರಿಗಳನ್ನು ಖರೀದಿಸಿದ್ದು. ಅಕ್ಕಿ, ಸಾಂಬಾರ್ ಪದಾರ್ಥ ಸೇರಿ ಬಹುಪಾಲು ಆಹಾರ ಪದಾರ್ಥಗಳನ್ನು ಬೆಂಗಳೂರಿನಿಂದಲೇ ತಂದಿದ್ದೆವು. ಅಡಿಗರು ಬರೆದಂತೆ 'ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕೆ' ಅಲ್ಲವೆ?

ಐಸ್‌ಲ್ಯಾಂಡ್‌ನ ಪ್ರಶ್ನಾತೀತ ನಿವಾಸಿಯಾದ ಚಳಿಯ ಅನುಭವವೇ ಪುಳಕಿತಗೊಳಿಸುತ್ತದೆ. ಇಡೀ ದ್ವೀಪವನ್ನು ದಟ್ಟ ಹಿಮ ಆವರಿಸಿ ಸೂರ್ಯನೂ ಅಪರೂಪದ ಅತಿಥಿಯಾಗಿದ್ದಾಗ, ವಾತಾವರಣದಲ್ಲಿ ಮೈನಸ್ ಡಿಗ್ರಿ ಕೊರೆತ. ಆಗ ಹಿಮಹೊದ್ದು ನಿಂತ ನಿಸರ್ಗ ನೋಡುವುದೇ ಸೊಗಸು. ಹೆಂಡತಿಯ ಮುನಿಸಿನಂತೆ ಮಳೆ ಯಾವ ಕ್ಷಣದಲ್ಲಾದರೂ ಬಂದು ಕಣ್ಣಾಮುಚ್ಚಾಲೆ ಆಡುವ ಪರಿ ಮತ್ತೂ ಚೆಂದ.

ಇಂಥ ವಿಸ್ಮಯಗಳನ್ನು ಮನ ತುಂಬಿಕೊಳ್ಳಲೆಂದೇ ಅಲ್ಲಿಂದ ಇಲ್ಲಿಗೆ ಬಂದವರನ್ನು ಐಸ್‌ಲ್ಯಾಂಡ್ ಬರಿಗೈಯಲ್ಲಿ ಕಳಿಸಲಿಲ್ಲ.

### ಮಧ್ಯರಾತ್ರಿಯಲ್ಲೂ ಸೂರ್ಯ...

ಐಸ್‌ಲ್ಯಾಂಡ್‌ಗೆ ಕಿರೀಟ ತೊಡಿಸಿದ ಕೆಲವು ವೈಶಿಷ್ಟ್ಯಗಳಲ್ಲಿ 'Northern Lights' ಪ್ರಮುಖವಾದುದು. ನಾರ್ವೆ ಮತ್ತು ಫಿನ್ಲೆಂಡ್‌ನಲ್ಲಿ ಕಾಣಸಿಗುವ Northern Lights ಅಥವಾ ಅರುಣೋದಯದ ಶೋಭೆಯ ಸೊಬಗು ಐಸ್‌ಲ್ಯಾಂಡ್‌ನಲ್ಲಿ ರೋಚಕ ಅನುಭವ ನೀಡುತ್ತದೆ. ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೂ ಕಾಣಸಿಗುವ ನಿಸರ್ಗದ ಈ ಅಸಾಮಾನ್ಯ ಕೌತುಕ ಗೋಚರಿಸಬೇಕಾದರೆ, ಆಕಾಶ ತಿಳಿಯಾಗಿರಬೇಕು. ಕಾಡುಗತ್ತಲೆಯಿದ್ದರೆ ವೀಕ್ಷಣೆ ವಿಭಿನ್ನ ಅನುಭವ. 'ಲ್ಯಾಂಡ್ ಆಫ್ ನಾರ್ದರ್ನ್ ಲೈಟ್ಸ್' ಎಂಬ ಹೆಸರು ದಕ್ಕಿದ್ದು ಇದೇ ಕಾರಣಕ್ಕೆ.

'ಮಿಡ್ ನೈಟ್ ಸನ್' ಅಥವಾ ಮಧ್ಯರಾತ್ರಿಯ ಸೂರ್ಯ ಈ ದ್ವೀಪದ ಬೇಸಿಗೆಯ ವಿಶೇಷತೆ. ತಡರಾತ್ರಿ 2 ಗಂಟೆಯೂ ಇಲ್ಲಿ ಮಟಮಟ ಮಧ್ಯಾಹ್ನ ಎರಡರಂತೆ! ರಾತ್ರಿಯಾಗುವುದೇ ಇಲ್ಲವೇನೋ ಎಂಬ ಸಂದೇಹ ಮೂಡಿಬಿಡುತ್ತದೆ. ಹೀಗಾಗಿ ಬೇಸಿಗೆಯಲ್ಲಿ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚು.

### ಜಲಲ ಜಲಲ ಜಲಧಾರೆ...

ಐಸ್‌ಲ್ಯಾಂಡ್ ಬೆಟ್ಟಗುಡ್ಡಗಳ ನಾಡು. ಹೆಸರುಗಳಿಂದ ಗುರುತಿಸಲಾಗುವ ಸುಮಾರು 200ಕ್ಕೂ ಹೆಚ್ಚು ಜಲಪಾತಗಳಿವೆ. ಸಾಕಷ್ಟು ಅನಾಮಿಕ ಜಲಧಾರೆಗಳಿವೆ. ಸ್ಥಳೀಯ ಭಾಷೆಯಲ್ಲಿ ಈ ಜಲಪಾತಗಳನ್ನು 'ಫಾಸ್' ಎನ್ನುತ್ತಾರೆ.

ಅನೂಹ್ಯ ಅನುಭವ ನೀಡುವ ಸ್ಕೋಗ ಜಲಪಾತ